**OS. No. 41/2023**
**DW - 1**

**ಪ್ರಮಾಣೀಕರಿಸಲಾದ ದಿನಾಂಕ: 04-06-2026**

**<u>ವಾಟೀ ಸವಾಲು : ವಾದಿ ಪರ ಶ್ರೀ. ಕೆ ಆರ್ ಡಿ ವಕೀಲರಿಂದ</u> :-**

1ನೇ ಪ್ರತಿವಾದಿ ಆರೋಗ್ಯವಾಗಿದ್ದಾರೆ ಎಂದರೆ ಸಾಕ್ಷಿ: ಅವರಿಗೆ ಅರೋಗ ಸರಿ ಇಲ್ಲ ಮತ್ತು ಅವರು ಓಡಾಡುವ ಸ್ಥಿತಿಯಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಅವರು ಆರೋಗ್ಯವಾಗಿದ್ದರೂ ಸಹ ನಾನು ಸರಿಯಾಗಿ ಬುದ್ದಿವಂತಿಕೆಯಿಂದ ಸಾಕ್ಷಿ ನುಡಿಯುತ್ತೇನೆಂದು ನನಗೆ SPA ನ್ನು ಬರೆದುಕೊಂಟ್ಟಿದ್ದಾರೆ ಎಂದರೆ ಸ ರಿಯಲ್ಲ.

ಸರ್ವೆನಂ. 95/2 ಮತ್ತು 127/1 ಮಾಲತಃ ಎಷ್ಟು ವಿಸ್ತೀರ್ಣ ಇತ್ತು ಎಂದು ನನಗೆ ಗೊತ್ತಿಲ್ಲ. ಎರಡೂ ಸರ್ವೆ ನಂಬರುಗಳು ಒಂದಕ್ಕೊಂದು ಅಂಟಿಕೂಂಡಿದೆ ಎಂದರೆ ಸರಿ . ಸರ್ವೆನಂ.95/2 ಮೂಲತಃ 2 ಎಕರೆ 22 ಗುಂಟೆ ಇತ್ತು ಎಂದರೆ ಗೊತ್ತಿಲ್ಲ. ಅದೇ ರೀತಿ 127/1 ಮೂಲತಃ 18 ಗುಂಟೆ ಇತ್ತು ಎಂದರೆ ಗೊತ್ತಿಲ್ಲ.

ಈ ದಾವೆಯನ್ನು ದಾಖಲು ಮಾಡುವ ಪೂರ್ವದಲ್ಲ ವಾದಿಯು ದಾವಾ ಆಸ್ತಿಯ ಸಂಬಂಧ ಖಾತೆ ಬದಲಾವಣೆ ಮಾಡಿಸಲು ಮೇಲ್ಮನವಿಯನ್ನು ಎಸಿ ನ್ಯಾಯಾಲಯದಲ್ಲಿ ಉಪವಿಭಾಗಧಿಕಾರಿಗಳ ಮುಂದೆ ದಾಖಲು ಮಾಡಿದ್ದರು ಎಂದರೆ ಸ ರಿ . ಸದರಿ ಎಸಿ ನ್ಯಾಯಾಲಯದಲ್ಲಿ ಸಿವಿಲ್ ನ್ಯಾಯಾಲಯಕ್ಕೆ ನಮ್ಮ ವಿಭಾಗವನ್ನು ಬಗೆಹರಿಸುವಂತೆ ಆದೇಶ ಮಾಡಲಾಯಿತು ಎಂದರೆ ಸರಿಯಲ್ಲ.

ದಾವಾ ಆಸ್ತಿಯು ಮೂಲತಃ ಸಣ್ಣ ಹೊಂಗೇಗೌಡ ರವರಿಗೆ ಸೇರಿದ ಜಮೀನಾಗಿರುತ್ತದೆ ಎಂದರೆ ಸರಿ. ಸದರಿ ಸಣ್ಣ ಹೊಂಗೇಗೌಡ ರವರಿಗೆ ಮೂರು ಜನ ಮಕ್ಕಳಿದ್ದು ಅವರು ತೋಪೇಗೌಡ ಉರುಫ್ ಬಿಳಿಯಪ್ಪ , ರಂಗೇಗೌಡ ಮತ್ತು ರಾಮೇಗೌಡ ಆಗಿರುತ್ತಾರೆ. ರಾಮೇಗೌಡ ರವರು ನಾನು ಜಮೀನನ್ನು ಖರೀದಿ ಮಾಡಿದ ನಂತರ ಮೃತಪಟ್ಟಿರುತ್ತಾರೆ. ರಾಮೇಗೌಡರಿಗೆ ಮಕ್ಕಳು ಇರಲ್ಲಿಲ್ಲ, ಆತನ ಹೆಂಡತಿ ಮೃಪಟ್ಟಿರುತ್ತಾರೆ.

ರಾಮೇಗೌಡ ರವರು ಮೃತ ಪಟ್ಟ ನಂತರ ದಿ:11-10- 1979 ರಲ್ಲಿ ತೋಪೇಗೌಡ ಮತ್ತು ರಂಗೇಗೌಡರವರ ನಡುವೆ ವಿಭಾಗ ಪತ್ರವಾಗಿರುತ್ತದೆ ಎಂದರೆ ಗೊತ್ತಿಲ್ಲ. ನನ್ನ ಹೆಸರಿಗೆ ಕ್ರಯಪತ್ರ ಆಗುವ ಕಾಲಕ್ಕೆ ವಿಭಾಗ ಆಗಿರಲಿಲ್ಲ , ಅವರು ಒಟ್ಟು ಕುಟುಂಬದಲ್ಲಿ ಇದ್ದರು.

ನಾನು 95/2 ರಲ್ಲಿ 20 ಗುಂಟೆ , ಸರ್ವೆ ನಂ. 127 ರಲ್ಲಿ 5 ಗುಂಟೆ ಜಮೀನನ್ನು

ಖರೀದಿ ಮಾಡಿರುತ್ತೇನೆ. ಈ ಎರಡೂ ಜಮೀನುಗಳಿಗೆ ಜಂಟಿಯಾಗಿ ಒಂದೇ ಚಕ್ಕುಬಂಧಿಯನ್ನು ನಮೂದಿಸಿ ಕ್ರಯಪತ್ರವನ್ನು ಮಾಡಿಕೊಟ್ಟಿರುತ್ತಾರೆ. ಸದರಿ ಜಮೀನಿನ ಪೂರ್ವಕ್ಕೆ- ವಾದಿ , ಪಶ್ಚಿಮಕ್ಕೆ- ನಾನು , ಉತ್ತರಕ್ಕೆ- ವಾದಿಯ ಜಮೀನು , ದಕ್ಷಿಣಕ್ಕೆ- ದೇವರ ಇನಾಂ ಜಮೀನು ಇರುತ್ತದೆ .

ವಾದಿಗಳಿಗೆ ಸರ್ವೆ ನಂ. 127 ರಲ್ಲಿ 13 ಗುಂಟೆ ಮತ್ತು 95/2 ರಲ್ಲಿ 31 ಗುಂಟೆ ಜಮೀನು ಬರುತ್ತದೆ ಎಂದರೆ ಸಾಕ್ಷಿ ಅಷ್ಟು ಬರುವುದಿಲ್ಲ, ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿ ಸ್ವಾ ದೀನದಲ್ಲಿರುವ ಜಮೀನಿನ ಪೂರ್ವಕ್ಕೆ ರಾಮೇಗೌಡ, ತಿಮ್ಮಮ್ಮ ಮತ್ತು ಇತರರ ಜಮೀನು ಇದೆ ಎಂದರೆ ಸರಿ . ಸದರಿ ಜಮೀನಿದಿನ ಪಶ್ಚಿಮಕ್ಕೆ ನನ್ನ ಜಮಿನು ಬರುತ್ತದೆ ಎಂದರೆ ಸ ರಿ . ಉತ್ತರಕ್ಕೆ ರಾಮೇಗೌಡ, ತೋಪೇಗೌಡ ಮತ್ತು ಬುಡ್ಡೇಗೌಡ ರವರ ಜಮೀನು ಬರುತ್ತದೆ ಎಂದರೆ ಸ ರಿ . ದಕ್ಷಿಣಕ್ಕೆ ಭೈರೇದೇವರ ಇನಾಂತಿ ಜಮೀನು ಬರುತ್ತದೆ ಎಂದರೆ ಸ ರಿ .

ಸರ್ವೆ ನಂ.127/1 ಮತ್ತು 95/2 ರ ಒಟ್ಟು ಚಕ್ಕುಬಂಧಿ ಮೇಲೆ ಹೇಳಿದಂತೆ ಇರುತ್ತದೆ ಎಂದರೆ ನನ್ನ 25 ಗುಂಟೆ ಜಮೀನನ್ನು ಹೊರತು ಪಡಿಸಿ ಇದೆ ಎಂದು ನುಡಿಯುತ್ತಾರೆ. ನನ್ನ 25 ಗುಂಟೆ ಜಮೀನಿನ ಸುತ್ತಲೂ ಬೇಲಿ ಇದೆ ಎಂದರೆ ಸರಿ. ಮೇಲೆ ಹೇಳಿದ ಚಕ್ಕುಬಂದಿಯಂತೆ ವಾದಿಯರು ಅವರ ಜಮೀನಿನಲ್ಲಿ ಸ್ವಾ ದೀನದಲ್ಲಿದ್ದಾರೆ ಎಂದರೆ ಸರಿ .

ಈ ಹಿಂದೆ ಸರ್ವೆ ನಂ.95/2 ರಲ್ಲಿ ವಾದಿಯ ತಂದೆಯ ಹೆಸರಿನಲ್ಲಿ 31 ಗುಂಟೆ ಜಮೀನು ಬರುತ್ತಿತ್ತು ಎಂದರೆ ಗೊತ್ತಿಲ್ಲ. ಅದೇ ರೀತಿ ಸರ್ವೆನಂ.127 ರಲ್ಲಿ ವಾದಿಯ ತಂದೆಯ ಹೆಸರಿನಲ್ಲಿ 13 ಗುಂಟೆ ಜಮೀನು ಬರುತ್ತಿತ್ತು ಎಂದರೆ ಗೊತ್ತಿಲ್ಲ.

ಈ ದಾವೆಯನ್ನು ವಾದಿಯು ದಾಖಲಿಸಿದ ನಂತರ ಅವರು ಹೇಳುವಂತೆ ದಾವಾ ಆಸ್ತಿಯ ಸಂಬಂಧ ನಾನು ಯಾವುದೇ ಕಂದಾಯ ದಾಖಲಾತಿಗಳನ್ನು ತೆಗೆಸಿ ಪರಿಶೀಲನೆ ಮಾಡಿರುವುದಿಲ್ಲ, ಕೇವಲ ನನ್ನ ಕ್ರಯದ ಜಮೀನಿಗೆ ಸಂಬಂದ ದಾಖಲಾತಿಗಳನ್ನು ಪರೀಶೀಲಿಸಿರುತ್ತೇನೆ. ವಿಭಾಗ ಪತ್ರದಂತೆ ವಾದಿಯ ತಂದೆಗೆ ಎಷ್ಟು ಜಮೀನು ಬಂದಿರುತ್ತದೆ ಎಂದು ನಾನು ನೋಡಿರುವುದಿಲ್ಲ.

ನಿಪಿ.3 ರಂತೆ ಪಹಣಿ ಸರ್ವೆ ನಂ.95/2 ರಲ್ಲಿ 31 ಗುಂಟೆ ಜಮೀನು ವಾದಿಯ ಹೆಸರಿನಲ್ಲಿ 2001-02 ರಲ್ಲಿ ಬರುತ್ತಿದೆ ಎಂದರೆ ಸ ರಿ . ನಿಪಿ.4 ರಂತೆ ಪಹಣಿ ಸರ್ವೆ ನಂಬರ್ 127/1 ರಲ್ಲಿ 13 ಗುಂಟೆ ಜಮೀನು ವಾದಿಯ ಹಸೆರಿನಲ್ಲಿ 2022-23 ರಲ್ಲಿ ಬರುತ್ತಿದ್ದೆ ಎಂದರೆ

ಸರಿ .

ಪಹಣಿಯಲ್ಲಿ ಮೇಲೆ ಹೇಳಿದ ವಿಸ್ತೀರ್ಣವನ್ನು ಬದಲಾಯಿಸಿ ಕಡಿಮೆ ತೋರಿಸಿದ ಕಾರಣ ವಾದಿಯು ಎಸಿ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿ ಅವರು ಯಾವ ಕಾರಣಕ್ಕಾಗಿ ಸಲ್ಲಿಸಿದ್ದರು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ರಂಗೇಗೌಡರು ಒಬ್ಬನೇ ಮಗ ವಾದಿಯಾಗಿರುತ್ತಾರೆ. ವಾದಿಗೆ ಪಿತ್ರಾರ್ಜಿತವಾಗಿ ಆಸ್ತಿ ಬಂದಿರುತ್ತದೆ ಎಂದರೆ ಸರಿ . ಪಿತ್ರಾರ್ಜಿತ ಅಸ್ತಿ ಯಲಿ ಅವರ ಪೂರ್ವಜರು ಯಾವ ರೀತಿ ಸ್ವಾದೀನದಲ್ಲಿದದರು ಅದೇ ರೀತಿ ವಾದಿಯು ಸ್ವಾದೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ನಮಗೆ ಮಾರಾಟ ಮಾಡಿದ 25 ಗುಂಟೆ ಜಮೀನನ್ನು ಹೊರತು ಪಡಿಸಿ ಉಳಿದ ಜಮೀನಿನಲ್ಲಿ ಸಾವದೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ.

ಸರ್ವೆ ನಂ. 127 ರಲ್ಲಿ 13 ಗುಂಟೆ ಮತ್ತು 95/2 ರಲ್ಲಿ 31 ಗುಂಟೆ ಜಮೀನು ವಾದಿಯ ಹೆಸರಿಗೆ ಖಾತೆ ಹಣಿಯಾಗಲು ನಿಮ್ಮ ತಕರಾರು ಇದೆಯಾ ಎಂದರೆ ಸಾಕ್ಷಿ ನನಗೆ ಮಾರಾಟ ಮಾಡಿದ 25 ಗುಂಟೆಯನ್ನು ಹೂರತು ಪಡಿಸಿ ಎಷ್ಟು ಜಮೀನು ಉಳಿದಿರುತ್ತದೆ ಅಷ್ಟು ಜಮೀನನ್ನು ಖಾತೆ ಮಾಡಿಸಲು ನನ್ನದು ಯಾವುದೇ ತಕರಾರು ಇಲ್ಲಎಂದು ನುಡಿಯುತ್ತಾರೆ.

ನ್ಯಾಯಾಲಯದಿಂದ ದಾವಾ ಆಸ್ತಿಗಳನ್ನು ಅಳತೆ ಮಾಡಿಸಲು ನಿಯೋಗಿಯ್ನು ನೇಮಕಮಾಡಲು ನನ್ನದು ಯಾವುದೇ ತಕಾರಾರು ಇಲ್ಲ.

**<u>ಮುಂದುವರೆದ ಪಾಟೀ ಸವಾಲಿಗೆ ಕೋರಿಕೆಯ ಮೇರೆಗೆ ಮುಂದೂಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**